5C.R.P.67

SC 115/2021,PW19

| Form No.4 (Civil)<br>Deposition Sheets<br>(R.P.No.57) |
|---|

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ.ನಂ. 115/ 2021

ದಿನಾಂಕ ಃ 03.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 26 ಡಬ್ಲ್ಯೂ: 19

| | |
|---|---|
| ಸಾಕ್ಷಿದಾರರ ಹೆಸರು | ದಯಾನಂದ |
| ತಂದೆಯ ಹೆಸರು | ವೀರಣ್ಣ |
| ವಯಸ್ಸು | 42 ವರ್ಷ |
| ಉದ್ಯೋಗ | ಪೊಲೀಸ್ ಇನ್ಸ್‌ಪೆಕ್ಟರ್ , ವಿಶೇಷ ತನಿಖಾ ತಂಡ, ಲೋಕಾಯುಕ್ತ, ಬೆಂಗಳೂರು |
| ವಾಸ | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) 17.11.2019 ರಿಂದ 25.02.2021 ರವರಗೆ ನಾನು ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಆಗಿ ಕಾರ್ಯ ನಿರ್ವಹಿಸಿದ್ದೆನು.

2) ದಿಃ 05.06.2020 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಾನು ಠಾಣೆಯ ಪ್ರಭಾರದಲ್ಲಿ ಇದ್ದಾಗ, ಪಿರ್ಯಾದಿ ಚಾಸಾ.1 ರವರು ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಮೊ. ನಂಃ 94/2020 ರಲ್ಲಿ ಪ್ರಕರಣನನ್ನು ದಾಖಲು ಮಾಡಿಕೊಂಡು ಪ್ರ.ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗೆ ನಿವೇದಿಸಿಕೊಂಡೆನು. ನಿಪಿ.2 ಲಿಖಿತ ದೂರನ್ನು ನೋಡುತ್ತಿದ್ದು, ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ನಿಪಿ. 23 ಎಂದು, ಸಹಿಯನ್ನು ನಿಪಿ.23(ಎ) ಎಂದು ಗುರುತಿಸಲಾಯಿತು.

3) ಅದೇ ದಿವಸ ಕೃತ್ಯ ನಡೆದ ಸ್ಥಳವಾಗಿದ್ದ ಕೃಷ್ಣಾಪುರ ಗ್ರಾಮಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮದಲ್ಲಿ ಸ್ಥಳ ಮಹಜರ್ ಮಾಡಿ , ಕೃತ್ಯ ನಡೆದ ಸ್ಥಳದಲ್ಲಿ ಇದ್ದ ರಕ್ತದ ಕಲೆಯಾಗಿದ್ದ ಹುಲ್ಲು ಮಿಶ್ರಿತ ಮಣ್ಣು ಮತ್ತು ಸಾದಾ ಹುಲ್ಲು ಮಿಶ್ರಿತ ಮಣ್ಣನ್ನು ಪ್ರತ್ಯೇಕ ಡಬ್ಬಿಯಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಕೆ ಆರ್ ಎಲ್ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಚಾಸಾ 1 ಪಿರ್ಯಾದಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದರು. ನಂತರ

ಕೃತ್ಯ ನಡೆದ ಸ್ಥಳದ ಪೂರ್ವಕ್ಕೆ 5 ಅಡಿ ಅಂತರದಲ್ಲಿ, ಆರೋಪಿ ಕೃತ್ಯಕ್ಕೆ ಬಳಸಿದ ಒಂದು ಕಬ್ಬಿಣದ ಕುಡಗೋಲನ್ನು ರಕ್ತದ ಕಲೆ ಇದ್ದು, ಇದನ್ನು ಎಫ್ ಎಸ್ ಎಲ್ ಗೆ ಕಳುಹಿಸಿಲು, ಒಂದು ಬಿಳಿ ಚೀಲದಲ್ಲಿ ಹಾಕಿ ಕಟ್ಟಿ ಕೆ ಆರ್ ಎಲ್ ಅಕ್ಷರದಿಂದ ಸೀಲು ಮಾಡಿದೆನು. ಚಾಸಾ.1 ಪಿರ್ಯಾದಿ, ಸದರಿ ಕುಡಗೋಲನ್ನು ಕೃತ್ಯಕ್ಕೆ ಬಳಸಿದ್ದಾಗಿ ತಿಳಿಸಿದ್ದರು. ನಂತರ ಪಿರ್ಯಾದಿಯು, ಹಲ್ಲೆಗೆ ಒಳಗಾಗಿದ್ದ ಸತೀಶ್ ರವರ ಬಟ್ಟೆಗಳನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವಾಗ, ತೆಗೆದು ಕೊಟ್ಟಿದ್ದನು, ಅದನ್ನು ಮನೆಗೆ ತಂದು ಇಟ್ಟಿದ್ದೇನೆ ಎಂದು ಅದನ್ನು ಹಾಜರು ಪಡಿಸಿದ ಮೇರೆಗೆ , ಒಂದು ಅರ್ಧ ತೋಳಿನ ನೀಲಿ ಬಣ್ಣ ಮತ್ತು ಬಿಳಿ ಬಣ್ಣದ ಗೆರೆ ಉಳ್ಳ ಹರಿದು ಹೋಗಿರುವ ಟೀ ಶರಟು, ಬರ್ಮುಡ ಚಡ್ಡಿ, ರಕ್ತದ ಕಲೆ ಇರುತ್ತೆ, ಮೇಲ್ಕಂಡ ಬಟ್ಟೆಗಳನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ ಕಟ್ಟಿ ಕೆ ಆರ್ ಎಲ್ ಅಕ್ಷರದಿಂದ ಸೀಲು ಮಾಡಿದೆನು. ನಂತರ ಬೆಳಿಗ್ಗೆ 11.30 ರಿಂದ 1.30 ಗಂಟೆ ವರೆಗೆ ಪಂಚರ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡು, ಪಂಚರ ಚೀಟಿಯನ್ನು ಅಂಟಿಸಿದೆನು. ಸ್ಥಳವನ್ನು ಪರಿಶೀಲನೆ ಮಾಡಿದ ಬಗ್ಗೆ ಮತ್ತು ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ಸ್ಥಳದಲ್ಲಿ ಮಹಜರ್ ನ್ನು ತಯಾರು ಮಾಡಿದೆನು ಮತ್ತು ಕಚ್ಚಾ ನಕ್ಷೆಯನ್ನು ತಯಾರಿಸಿದೆನು. ನಿಪಿ.3 ಪಂಚನಾಮೆಯನ್ನು ಈಗ ನೋಡುತ್ತಿದ್ದು, ನನ್ನ ಸಹಿಯನ್ನು ನಿಪಿ.3(ಡಿ) ಎಂದು ಗುರುತಿಸಲಾಯಿತು. ಜಪ್ತಿ ಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮುಮಾ 1 ರಿಂದ 5 ವಸ್ತುಗಳನ್ನು ನೋಡಿ ಗುರುತಿಸುತ್ತಾರೆ. ಎಲ್ಲಾ ವಸ್ತುಗಳ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇದ್ದು, ಸಹಿಯನ್ನು ಮುಮಾ 1(ಸಿ) ರಿಂದ 5(ಸಿ) ಎಂದು ಗುರುತಿಸಲಾಯಿತು.

4) ಈಗ ನನಗೆ ತೋರಿಸಿದ ನಿಪಿ.4 ಮತ್ತು 5 ಫೋಟೋದಲ್ಲಿ, ನಾನು,ಪಿರ್ಯಾದಿ ಮತ್ತು ಪಂಚರು ಇರುವುದಾಗಿ ಸಾಕ್ಷಿ ಹೇಳುತ್ತಾರೆ. ಈಗ ನನಗೆ ತೋರಿಸಿದ ನಿಪಿ.6 ಫೋಟೋದಲ್ಲಿ, ಪಿರ್ಯಾದಿದಾರರು ಜಾಗವನ್ನು ತೋರಿಸುತ್ತಿದ್ದಾರೆ, ನಿಪಿ.7 ರಲ್ಲಿ ಬಟ್ಟೆಗಳನ್ನು ಹಾಜರು ಪಡಿಸಿದ್ದಾರೆ. ಅಮಾನತ್ತು ಪಡಿಸಿದ್ದ ವಸ್ತುಗಳನ್ನು ಠಾಣೆಗೆ ಬಂದು ಮಾಲು ಪಟ್ಟಿ ನಂಃ 67/2020 ರಲ್ಲಿ ನಮೂದಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಕೊಂಡೆನು. ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಎಫ್ಎಸ್ಎಲ್ ಗೆ ಕಳುಹಿಸಲು ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡೆನು. ನಂತರ ಸಾಕ್ಷಿದಾರರಾದ ಲೊಕೇಶ್, ನಾಗರಾಜು, ಶಂಕರೇಗೌಡ ಮತ್ತು ನಾರಾಯಣ ರವರ ಹೇಳಿಕೆ ಪಡೆದನು. ಚಾಸಾ .8 ನಾರಾಯಣ ರವರು ನನ್ನ ಮುಂದೆ ನಿಪಿ.13 ರಂತೆ ಹೇಳಿಕೆ ನೀಡಿದ್ದಾರೆ. ಅದೇ ದಿನ ಆರೋಪಿಗಳ ಪತ್ತೆಗಾಗಿ ಚಾಸಾ.18 ಗೋಪಾಲಕೃಷ್ಣ ರವರನ್ನು ನೇಮಕ ಮಾಡಿರುತ್ತೇನೆ.

5) ದಿಃ 06.06.2020 ರಂದು ಗಾಯಾಳು ಸತೀಶ್ ರವರು ಚಿಕಿತ್ಸೆ ಪಡೆಯುತ್ತಿದ್ದ ಮಲ್ಟಿಸ್ಪೆಷಾಲಿಗಿ ಆಸ್ಪತ್ರೆಗೆ ಭೇಟಿ ನೀಡಿ , ವೈದ್ಯರಿಗೆ ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರುವ ಬಗ್ಗೆ ವೈದ್ಯರಿಂದ

ಖಾತರಿಪಡಿಸಿಕೊಂಡು, ಗಾಯಾಳುವಿನ ಹೇಳಿಕೆಯನ್ನು ದಾಖಲು ಮಾಡಿಕೊಂಡನು. ನಿಪಿ.22 ವೈದ್ಯರಿಗೆ ಸಲ್ಲಿಸಿಕೊಂಡ ಕೋರಿಕೆ ಪತ್ರ ಆಗಿರುತ್ತದೆ. ಇದರಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ.22(ಎ)ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿಕೊಂಡಿದ್ದ ಚಾಸಾ 2 ಸತೀಶ್ ಗಾಯಾಳುರವರ ಹೇಳಿಕೆ ನಿಪಿ.1ನ್ನು ಮಾಡಿಕೊಂಡಿದ್ದು, ಇದರಲ್ಲಿ ನನ್ನ ಸಹಿ ಇದ್ದು ಸಹಿಯನ್ನು ನಿಪಿ.1(ಬಿ)ಎಂದು ಗುರುತಿಸಲಾಯಿತು. ಚಾಸಾ 2 ಗಾಯಾಳು ಸತೀಶ ರವರ ರಕ್ತದ ಗುಂಪು ಯಾವುದು ಎಂದು ಪರೀಕ್ಷಿಸಿ ವರದಿ ನೀಡುವಂತೆ ವೈದ್ಯರಿಗೆ ಕೋರಿಕೆ ಪತ್ರವನ್ನು ನೀಡಿದ್ದೆನು. ಈಗ ಅದನ್ನು ನೋಡುತ್ತಿದ್ದು, ನಿಪಿ. 24 ಎಂದು, ಹಾಗೂ ನನ್ನ ಸಹಿಯನ್ನು ನಿಪಿ.24(ಎ)ಎಂದು ಗುರುತಿಸಲಾಯಿತು. ವೈದ್ಯಾಧಿಕಾರಿ ನೀಡಿದ ರಕ್ತದ ಗುಂಪಿನ ವರದಿಯನ್ನು ನೋಡುತ್ತಿದ್ದು, ಇದನ್ನು ನಿಪಿ.25 ಎಂದು, ಹಾಗೂ ನನ್ನ ಸಹಿಯನ್ನು ನಿಪಿ.25(ಎ)ಎಂದು ಗುರುತಿಸಲಾಯಿತು.

6) ಆರೋಪಿ ಪತ್ತೆಗಾಗಿ ದಿಃ 06.06.2020 ರಂದು ಪೊಲೀಸ್ ಸಿಬ್ಬಂದಿ ಚಾಸಾ19. ರವರನ್ನು ನೇಮಿಸಿದ್ದೆನು. ದಿಃ 11.06.2020 ರಂದು ಆರೋಪಿ ಪತ್ತೆಗಾಗಿ ಪೊಲೀಸ್ ಸಿಬ್ಬಂದಿ ಗಳಾದ ಚಾಸಾ.20 ಮಂಜುನಾಥ ಮತ್ತು ಚಾಸಾ 21 ಸಂದೇಶ್ ಪಟೇಲ್ ರವರನ್ನು ನೇಮಕ ಮಾಡಿದ್ದೆನು. ದಿಃ 12.06.2020 ರಂದ ಮಧ್ಯಾಹ್ನ 12.00 ಗಂಟೆ ಸಮಯಕ್ಕೆ ಪೊಲೀಸ್ ಸಿಬ್ಬಂದಿಗಳಾದ ಚಾಸಾ.20 ಮಂಜುನಾಥ ಮತ್ತು ಚಾಸಾ 21 ಸಂದೇಶ್ ಪಟೇಲ್ ರವರು, ಆರೋಪಿಯನ್ನು ಅವರ ವಶಕ್ಕೆ ತೆಗೆದುಕೊಂಡು ನನ್ನ ಮುಂದೆ ವರದಿಯೊಂದಿಗೆ ಹಾಜರು ಪಡಿಸಿದರು. ನಿಪಿ.21 ವರದಿಯನ್ನು ಈಗ ನೋಡುತ್ತಿದ್ದು , ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.21(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ವಿಚಾರಣೆ ಮಾಡಿ, ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ದಸ್ತಗಿರಿ ಮಾಡಿದೆನು. ನಂತರ ಆರೋಪಿಯು, ಕೃತ್ಯ ನಡೆದ ಸ್ಥಳ ಮತ್ತು ಕುಡಗೋಲನ್ನು ಬಿಸಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಪಂಚರಾದ ಚಾಸಾ 10 ಮತ್ತು ಚಾಸಾ.11 ಅಭಿಲಾಷ್ ರವರನ್ನು ಠಾಣೆಗೆ ಕರೆಸಿ, ಪ್ರಕರಣದ ವಿದ್ಯಮಾನವನ್ನು ತಿಳಿಸಿ , ಆರೋಪಿ ಮತ್ತು ಪಂಚರೊಂದಿಗೆ, ಕೃತ್ಯ ನಡೆದ ಸ್ಥಳವಾಗಿದ್ದ ಕೃಷ್ಣಾಪುರ ಗ್ರಾಮಕ್ಕೆ , ಆರೋಪಿ ಸ್ಥಳ ತೋರಿಸಿದ ಮೇರೆಗೆ , ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮವನ್ನು ಮಧ್ಯಾಹ್ನ 1.30 ರಿಂದ 2.00 ಗಂಟೆವರಗೆ ಜರುಗಿಸಿ ಮತ್ತು ಕೃತ್ಯ ನಡೆದ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತೇನೆ. ನಿಪಿ.10 ಸ್ಥಳ ಮಹಜರನ್ನು ಈಗ ನೋಡುತ್ತಿದ್ದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.10(ಸಿ) ಎಂದು ಗುರುತಿಸಲಾಯಿತು. ಕಚ್ಚಾ ನಕ್ಷೆಯನ್ನು ನೋಡುತ್ತಿದ್ದು,ಇದನ್ನು ನಿಪಿ.26 ಎಂದು, ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಆರೋಪಿಯು ತೋರಿಸಿದ ಕೃತ್ಯ ನಡೆದ ಸ್ಥಳದ ಫೋಟೋವನ್ನು ತೆಗೆಸಿರುತ್ತೇನೆ. ಅದು

ನಿಪಿ.8 ಮತ್ತು 9 ಆಗಿರುತ್ತದೆ. ನಂತರ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಮಾನ್ಯ ನ್ಯಾಯಾಲಯಕ್ಕೆ ಸಿಬ್ಬಂದಿಗಳಾದ ಮಂಜುನಾಥ ಮತ್ತು ಸಂದೇಶ್ ಪಟೇಲ್ ರವರ ಬೆಂಗಾವಲಿನೊಂದಿಗೆ ಹಾಜರು ಪಡಿಸಿದ್ದೇನೆ.

**ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ, ಮುಖ್ಯ ವಿಚಾರಣೆಯನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ದಿನಾಂಕ ಃ 03.07.2024 ರಂದು ಮಧ್ಯಾಹ್ನ ಪಿ ಡಬ್ಲೂಃ 19 ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋದಿಸಲಾಗಿದೆ.

ಸದರಿ ಸಾಕ್ಷಿಯು, ಅನಾರೋಗ್ಯದಿಂದ ಬಳಲುತ್ತಿರುವುದಾಗಿ ತಿಳಿಸಿ, ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.